# ಅನೇಕ ಪ್ರಾಂತಗಳ ಯೆಹೂದ್ಯರು ಯೆರೂಸಲೇಮಿನಲ್ಲಿ ಕೂಡಿ ಬಂದರು

"ಸಕಲ ಮಾರ್ಗಗಳು ರೋಮಿಗೆ ನಡಿಸುತ್ತವೆ" ಎಂಬ ನಾಣ್ಣುಡಿ ಇದೆ. ರೋಮಾ ಪಟ್ಟಣವು ರೋಮಾ ಸಾಮ್ರಾಜ್ಯದ ಮುಖ್ಯ ಕೇಂದ್ರವಾಗಿತ್ತು - ಯೇಸುವಿನ ಶಿಲುಬೆಯ ಮರಣದ ಪುನರುತ್ಥಾದದ ಸಂದರ್ಭದಲ್ಲಿ, ಯೆಹೂದ್ಯರ ಗಮನ ಇನ್ನೊಂದೆಡೆಯಿತ್ತು. ಅವರು ಪಸ್ಕ ಹಬ್ಬಕ್ಕಾಗಿ ಯೆರೂಸಲೇಮಿನಲ್ಲಿ ಸೇರಿ ಬಂದಿದ್ದರು. ಪಾರ್ಥ್ಯರೂ, ಮೇದ್ಯರೂ, ಏಲಾಮ್ಯರೂ, ಮೆಸೋಪೊತಾಮ್ಯ, ಯೂದಾಯ, ಕಪ್ಪದೋಕ್ಯ, ಪೊಂತ, ಆಸ್ಯ, ಫ್ರುಗ್ಯ, ಪಂಫುಲ್ಯ, ಐಗುಪ್ತ, ಕುರೇನೆಯ ಮಗ್ಗುಲಲ್ಲಿರುವ ಲಿಬ್ಯ, ಈ ಸೀಮೆಗಳಲ್ಲಿ ವಾಸವಾಗಿರುವವರೂ ರೋಮಾಪುರದಿಂದ ಬಂದು ಇಳಿದಿರುವ ಯೆಹೂದ್ಯರೂ ಯೆಹೂದ್ಯ ಮತಾವಲಂಭಿಗಳೂ ಕ್ರೇತ್ಯರೂ ಅರಬೂ ದೇಶದವರೂ ಆಗಿರುವ ನಾವು ನಮ್ಮ ನಮ್ಮ ಭಾಷೆಗಳಲ್ಲಿ ಇವರು ದೇವರ ಮಹತ್ತುಗಳ ವಿಷಯವಾಗಿ ಹೇಳುವದನ್ನು ಕೇಳುತ್ತೇವೆ ಅಂದು ಕೊಂಡರು (ಅಪೊಸ್ತಲರ ಕೃತ್ಯಗಳು 2:9-11). ಆ ಗುಂಪಿನಲ್ಲಿದ್ದ ಕೆಲವರು ಆತನನ್ನು "ಶಿಲುಬೆಗೆ ಹಾಕಿಸು!" ಎಂದು ಕೂಗಿದ್ದರು.

ಪಸ್ಕ ಹಬ್ಬವಾದ ಐವತ್ತು ದಿನಗಳ ನಂತರ, ಪಂಚಾಶತ್ತಮ ದಿನದಂದು ಮತ್ತೊಂದು ಗುಂಪು ಸೇರಿ ಬಂದಿತ್ತು. ಯೇಸುವಿನ ಕಾಲದಲ್ಲಿ ಜೀವಿಸಿ, ಆತನ ಮರಣ ಪುನರುತ್ಥಾನಕ್ಕೆ ಸಾಕ್ಷಿಯಾಗಿದ್ದವರು ಸಹ ಆ ಗುಂಪಿನಲ್ಲಿದ್ದರು. ಪೇತ್ರ ಮತ್ತು ಇತರೆ ಅಪೊಸ್ತಲರು ಸುವಾರ್ತೆಯ ಪ್ರಥಮ ಪ್ರಸಂಗವನ್ನು ಮಾಡಿದಾಗ, ಯೆಹೂದ್ಯರಿಗೆ, "... ನೀವು ಶಿಲುಬೆಗೆ ಹಾಕಿಸಿದ ಈ ಯೇಸುವನ್ನು ದೇವರು ಒಡೆಯನನ್ನಾಗಿಯೂ ಕ್ರಿಸ್ತನನ್ನಾಗಿಯೂ ಮಾಡಿದ್ದಾನೆಂದು" (ಅಪೊಸ್ತಲರ ಕೃತ್ಯಗಳು 2:36) ಹೇಳಿದರು. "ಆಗ ಅವರ ಹೃದಯಗಳು ಅಲಗು ನೆಟ್ಟಂತಾಗಿ, ... ಸಹೋದರರರೇ ಈಗ ನಾವೇನು ಮಾಡಬೇಕು ಅಂದರು" (ಅಪೊಸ್ತಲರ ಕೃತ್ಯಗಳು 2:37). "ನಿಮ್ಮ ಪಾಪಗಳು ಪರಿಹಾರವಾಗುವದಕ್ಕಾಗಿ ನಿಮ್ಮಲ್ಲಿ ಪ್ರತಿಯೊಬ್ಬರು ದೇವರ ಕಡೆಗೆ ತಿರುಗಿಕೊಂಡು ಯೇಸು ಕ್ರಿಸ್ತನ ಹೆಸರಿನ ಮೇಲೆ ದೀಕ್ಷಾಸ್ನಾನ ಮಾಡಿಸಿಕೊಳ್ಳಿರಿ, ಆಗ ನೀವು ಪವಿತ್ರಾತ್ಮದಾನವನ್ನು ಹೊಂದುವಿರಿ" (ಅಪೊಸ್ತಲರ ಕೃತ್ಯಗಳು 2:38). ಮೂರು ಸಾವಿರ ಜನರು ದೀಕ್ಷಾಸ್ನಾನ ಹೊಂದಿ, ಸಭೆಯು ಸ್ಥಾಪನೆಗೊಂಡಿತು.

ಈ ದಿನ ಯೆರೂಸಲೇಮು ಪ್ರಮುಖ ಸ್ಥಾನವನ್ನು ಹೊಂದಿತ್ತು. ಸಭೆಯು ವೃದ್ಧಿ ಯಾಗುವಾಗ, ಅನೇಕ ಜನರು ಯೆರೂಸಲೇಮಿನಲ್ಲಿ ತಂಗಿದ್ದರು ನಂತರ ಚದುರಿಹೋದವರು. ಕೆಲವರು ಚದುರಿಹೋಗಿ ಬೇರೆ ದೇಶಗಳಿಗೆ ಸುವಾರ್ತೆಯನ್ನು ತಲುಪಿದರು.